# ಬುಕ್ಕರಾಯನ ಶ್ರವಣಬೆಳ್ಗೊಳ ಶಾಸನದ ಮೇಲೆ ಹೊಸಬೆಳಕು

ಕ್ರಿ.ಶ. 1368ರ ಬುಕ್ಕರಾಯನ ಶ್ರವಣಬೆಳ್ಗೊಳ ಶಾಸನವು[1] ತನ್ನ ಶ್ರೇಷ್ಠ ಸಂದೇಶದಿಂದಾಗಿ ಪ್ರಸಿದ್ಧವಾಗಿರುವುದರಲ್ಲಿ ಆಶ್ಚರ್ಯಪಡಬೇಕಾದ್ದೇನೂ ಇಲ್ಲ. ಜೈನರಿಗೂ ಶ್ರೀವೈಷ್ಣವರಿಗೂ ಮತೀಯ ಘರ್ಷಣೆಗಳು ನಡೆದು ಗಂಭೀರ ರೂಪವನ್ನು ತಾಳಿದಾಗ ಬುಕ್ಕನು ಅವರಿಬ್ಬರ ನಾಯಕರನ್ನೂ ಕರೆಸಿ ಇಬ್ಬರೂ ಪರಸ್ಪರ ಕೈಹಿಡಿದುಕೊಳ್ಳುವಂತೆ ಮಾಡಿ, ಜೈನ ಮತ್ತು ವೈಷ್ಣವ ಮತಗಳಿಗೆ ಯಾವುದೇ ಭೇದವಿಲ್ಲವೆಂದು ಘೋಷಿಸಿದ ಸಂಗತಿ ಆ ಶಾಸನದಲ್ಲಿ ಪ್ರತಿಪಾದಿತವಾಗಿದೆ. ಆ ಸಂದೇಶವು ಅಂದಿನ ರಾಜಕೀಯ ಅಗತ್ಯವೂ ಆಗಿದ್ದಿತು. ಅದು ಹೊಸದಾಗಿ ಉದಯವಾಗಿದ್ದ ವಿಜಯನಗರ ರಾಜಕೀಯ ಅಗತ್ಯವೂ ಆಗಿದ್ದಿತು. ಅದು ಹೊಸದಾಗಿ ಉದಯವಾಗಿದ್ದ ವಿಜಯನಗರ ಸಾಮ್ರಾಜ್ಯದ ಭದ್ರತೆ ಮತ್ತು ಬೆಳವಣಿಗೆಗೆ ಅಗತ್ಯವೂ ಆಗಿದ್ದಿತು. ಮುಸ್ಲಿಮ್ ದಾಳಿಗೆ ಸಿಲುಕಿ ನಾಶವಾಗುವಂತಿದ್ದ ಸನಾತನ ಧರ್ಮದ ಸಂರಕ್ಷಣೆಗಾಗಿ ಕ್ರಿ.ಶ. 1336ರಲ್ಲಿ ಉದಯವಾದ ಸಾಮ್ರಾಜ್ಯಕ್ಕೆ ಎಲ್ಲ ಭಾರತೀಯ ಮತ ಧರ್ಮಗಳೂ ಒಗ್ಗಟ್ಟಿನಿಂದಿರುವುದು ಅಗತ್ಯವಾಗಿದ್ದಿತು. ಕರ್ನಾಟಕದ ಅಥವಾ ಭಾರತದ ಚರಿತ್ರೆಯ ಸಂದರ್ಭದಲ್ಲಿ ಮೇಲಿನ ಶಾಸನದ ಉಲ್ಲೇಖ ಮತ್ತೆ ಮತ್ತೆ ಬರುತ್ತಿದ್ದರೂ ಇಲ್ಲಿಯವರೆಗೆ ಆ ಶಾಸನವನ್ನೇ ಲಕ್ಷ್ಯದಲ್ಲಿರಿಸಿಕೊಂಡು ಯಾರೂ ವಿಶೇಷವಾಗಿ ಚರ್ಚೆ ಮಾಡಿಲ್ಲ. ಅಶೋಕನ 'ಧರ್ಮಲಿಪಿ'ಯನ್ನು ನೆನಪಿಗೆ ತರುವ ಮೇಲಿನ ಅತಿಮುಖ್ಯ ಶಾಸನವು ಎಬ್ಬಿಸಿರುವ ಸಮಸ್ಯೆಗಳ ಸ್ವರೂಪ ಮತ್ತು ಅವುಗಳ ಪರಿಹಾರವನ್ನು ಕುರಿತಂತೆ ಇದೇ ಮೊದಲ ಚರ್ಚೆಯೆಂದು ನಿಸ್ಸಂಶಯವಾಗಿ ಹೇಳಬಹುದು.

## ಕಲ್ಯ ಪಾಠವೇ ಮೂಲ

ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನ ಕಲ್ಯ ಗ್ರಾಮದಲ್ಲಿ ಮೇಲಿನ ಶಾಸನದ ಪಾಠವನ್ನೇ ಬಹುತೇಕ ಹೊಂದಿರುವ ಶಾಸನವಿರುವ ಸಂಗತಿ ಶಾಸನಶಾಸ್ತ್ರಜ್ಞರಿಗೆ ತಿಳಿದಿರುವ ಸಂಗತಿಯಾಗಿದೆ.[2] ಕಲ್ಯ ಶಾಸನದ ಪಾಠವು ಶ್ರವಣಬೆಳ್ಗೊಳ (ಅಥವಾ ಬೆಳ್ಗೊಳದ) ಶಾಸನದ ಪಾಠದ ಪ್ರತಿಯೆಂದು ಭಾವಿಸುವ ಪ್ರವೃತ್ತಿ ಕಂಡುಬರುತ್ತದೆ. ಸ್ಪಷ್ಟವಾಗಿ ಹೇಳಬೇಕೆಂದರೆ, ಕಲ್ಯ ಪಾಠವೇ ಮೂಲ; ಶ್ರವಣಬೆಳ್ಗೊಳ ಪಾಠವು ಕಲ್ಯ ಪಾಠದ ವಿಸ್ತೃತ ಪಾಠವಾಗಿರುವುದಲ್ಲದೆ, ಮೆದುಗೊಂಡ (Softened) ಪಾಠವೂ ಆಗಿದೆ. ಕಲ್ಯ ಶಾಸನವನ್ನು ಶಕ 1290ರ ಕೀಲಕ ಸಂವತ್ಸರ ಶ್ರಾವಣಶುದ್ಧ 2 ಸೋಮವಾರದಂದು ಹಾಕಿಸಲಾಗಿದೆ; ಶ್ರವಣಬೆಳ್ಗೊಳ

ಶಾಸನವನ್ನು ಅದೇ ಶಕದ ಅದೇ ಕೀಲಕ ಸಂವತ್ಸರದ ಭಾದ್ರಪದ ಶುದ್ಧ 10 ಗುರುವಾರದಂದು ಹಾಕಿಸಲಾಗಿದೆ. ಎಂದರೆ, ಕಲ್ಯ ಶಾಸನವು ಸ್ಥಾಪಿತವಾದ ಐದು ವಾರಗಳ ಬಳಿಕ ಶ್ರವಣಬೆಳ್ಗೊಳ ಶಾಸನವು ಸ್ಥಾಪನೆಗೊಂಡಿದೆ.

## ಮೆದುಗೊಂಡ ಪಾಠ

ಈ ಎರಡು ಶಾಸನಗಳನ್ನೂ ಹಾಕಿಸಿದ ಹಿನ್ನೆಲೆ ಸಾಕಷ್ಟು ಪ್ರಸಿದ್ಧವಾದುದು. ಶ್ರೀ ವೈಷ್ಣವರ ಉಪಟಳಕ್ಕೆ ಒಳಗಾದ ಜೈನರು ಚಕ್ರವರ್ತಿ ಬುಕ್ಕನ ಬಳಿ ಹೋಗಿ ಶ್ರೀ ವೈಷ್ಣವರಿಂದ (ಎಂದರೆ ಅಯ್ಯಂಗಾರ್ ಬ್ರಾಹ್ಮಣರಿಂದ ಮತ್ತು ಅವರ ಶೂದ್ರವರ್ಗದ ಅನುಯಾಯಿಗಳಿಂದ) ತಮಗಾಗುತ್ತಿರುವ 'ಅನ್ಯಾಯ'ಗಳನ್ನು ತೋಡಿಕೊಂಡರು. ಬೆಳ್ಗೊಳ ಪಾಠವು 'ಅನ್ಯಾಯಗಳು' ಎಂಬ ಸಾಮಾನ್ಯ ಪದವನ್ನು ಬಳಸುತ್ತದೆಯೇ ಹೊರತು, ಆ ಅನ್ಯಾಯಗಳ ಸ್ವರೂಪವೇನು ಎಂಬುದನ್ನು ಹೇಳುವುದಿಲ. ಕಲ್ಯ ಪಾಠವಾದರೋ ಸ್ಪಷ್ಟವಾಗಿ ಶ್ರೀ ವೈಷ್ಣವರು ಜೈನರನ್ನು ಕೊಂದರು ಎಂದು ಹೇಳುತ್ತದೆ. ('ಭಕ್ತರು ಅನ್ಯಾಯದಲು ಕೊಲ್ಲುವದನು ಬಿನ್ನಹಮ್ ಮಾಡೆ'). ಕಲ್ಯ ಪಾಠವನ್ನು ಪರಿಷ್ಕರಿಸಿ ಬೆಳ್ಗೊಳ ಪಾಠವನ್ನು ಸಿದ್ಧಪಡಿಸಿದೆಯೆಂಬುದು ಸ್ಪಷ್ಟವಾಗಿದೆ. ಹೀಗೆ ಮಾರ್ಪಡಿಸಲು ಕಾರಣವೇನು ಎಂಬುದೂ ಅಷ್ಟೇ ಸ್ಪಷ್ಟ. ಬುಕ್ಕನನ್ನು ಭೇಟಿಮಾಡಿದ ಜೈನರ ನಿಯೋಗದಲ್ಲಿ ಆನೆಗುಂದಿ, ಹೊಸಪಟ್ಟಣ (ವಿಜಯನಗರ-ಹಂಪೆ), ಪೆನುಗೊಂಡೆ, ಕಲ್ಯ ಊರುಗಳ ಜೈನ ಮುಖಂಡರಿದ್ದುದಲ್ಲದೆ ಆ ನಿಯೋಗಕ್ಕೆ ಕಲ್ಯದ ಬುಸುವಿಸೆಟ್ಟಿ ಎಂಬಾತ ನಾಯಕನಾಗಿದ್ದನು. (ಆ ವಿವಾದಕ್ಕೆ ಸಂಬಂಧಿಸಿದ ಬುಕ್ಕನ ತೀರ್ಪು ಮತ್ತು ಸಂದೇಶಗಳನ್ನೊಳಗೊಂಡ ಶಾಸನವನ್ನು ಕಲ್ಯದಲ್ಲಿ ಮೊದಲು ಹಾಕಿಸಲು ಆ ನಿಯೋಗದ ನಾಯಕ ಕಲ್ಯದವನಾಗಿದ್ದುದೂ ಕಾರಣ). ಜೈನರ ಅಹವಾಲನ್ನು ಕೇಳಿಸಿಕೊಂಡ ಚಕ್ರವರ್ತಿಯು, ಬಹುಶಃ ತನ್ನ ರಾಜಧಾನಿಗೆ[3] ಶ್ರೀ ವೈಷ್ಣವ ಧರ್ಮಕ್ಕೆ ಸೇರಿದ ಶ್ರೀರಂಗ, ತಿರುಪತಿ, ಕಂಚಿ ಮತ್ತು ಮೇಲ್ಕೋಟೆಗಳ ಮಠಾಧೀಶರನ್ನೂ 'ಹದಿನೆಂಟು ಜಾತಿಯ' ಜನಗಳೂ ಸೇರಿದಂತೆ ಹಲವರು ಶ್ರೀವೈಷ್ಣವ ಮತಾನುಯಾಯಿ ಗಳನ್ನೂ ಬರಮಾಡಿಕೊಂಡನು. ಇದು ಜೈನರ ಶ್ರೀವೈಷ್ಣವರ ತಿಕ್ಕಾಟಗಳು ತೀವ್ರ ರೂಪವನ್ನು ತಾಳಿದ್ದುವೆಂಬುದರ ನಿದರ್ಶನ. ಶ್ರೀವೈಷ್ಣವರ ತಂಡಕ್ಕೆ ತಿರುಪತಿಯ ತಾತಯ್ಯ ಮುಖ್ಯ ನಾಗಿದ್ದನು. ಜೈನಧರ್ಮ ವೈಷ್ಣವಧರ್ಮಗಳಿಗೆ ಮೂಲಭೂತ ವ್ಯತ್ಯಾಸಗಳಿಲ್ಲವೆಂದೂ, ಕಲ್ಯ ಮತ್ತು ಇತರ ಊರುಗಳಲ್ಲಿನ ಬಸದಿಗಳ 'ಪಂಚಮಹಾವಾದ್ಯ' ಮತ್ತು 'ಕಲಶಗಳ'[4] ಗೌರವವನ್ನು ಎಲ್ಲರೂ ಮನ್ನಿಸಬೇಕೆಂದೂ ಎರಡು ಗುಂಪುಗಳಿಗೂ ಮನದಟ್ಟು ಮಾಡಿ ಕೊಡುವಲ್ಲಿ ಬುಕ್ಕನು ಯಶಸ್ವಿಯಾದನು. ತನ್ನ ರಾಜ್ಯದ ಜೈನರ ಪೂಜಾಮಂದಿರಗಳನ್ನು ರಕ್ಷಿಸುವ ಹೊಣೆ ಶ್ರೀವೈಷ್ಣವರದಾಗಿದೆಯೆಂದೂ ಕಟ್ಟಳೆ ಮಾಡಿದನು ("ಮಹಾರಾಜನು ವೈಷ್ಣವ ದರ್ಶನಕ್ಕೆಊ ಜೈನದರ್ಶನಕ್ಕೆಊ ಭೇದವಿಲ್ಲವೆಂದು ರಾಯನು ವೈಷ್ಣವರ ಕಯ್ಯಲು ಜೈನರ ಕೈವಿಡಿದು ಕೊಟ್ಟು ಯೀ ಜೈನದರ್ಶನಕ್ಕೆ ಪೂರ್ವಮರ್ಯಾದೆಯಲು ಪಂಚಮಹಾ ವಾದ್ಯಂಗಳು ಕಲಶವು ಸಲುವುದು ಜೈನದರ್ಶನಕ್ಕೆ ಭಕ್ತರ ದೆಸೆಯಿಂದ ಹಾನಿವೃದ್ಧಿಯಾದರೂ ವೈಷ್ಣವ ಹಾನಿ ವೃದ್ಧಿಯಾಗಿ ಪಾಲಿಸುವರು ಯೀ ಮರ್ಯಾಧೆಯಲು ಯಲ್ಲಾ ರಾಜ್ಯದೊಳ

ಗುಳ್ಳಂತಹ ಬಸ್ತಿಗಳಿಗೆ ಶ್ರೀವೈಷ್ಣವರು ಶಾಸನವ ನಟ್ಟು ಪಾಲಿಸುವರು ಚಂದ್ರಾರ್ಕಸ್ಥಾಯಿ ಯಾಗಿ ವೈಷ್ಣವ ಸಮಯವು(ವ?) ಜೈನದರ್ಶನವ ರಕ್ಷಿಸಿಕೊಂಡು ಬಹೆವು ವೈಷ್ಣವರು ಜೈನರುವೊಂದು ಭೇದವಾಗಿ ಕಾಣಲಾಗದು").[5]

ಬುಕ್ಕನ ತೀರ್ಪು ಆಕ್ರಮಣಕ್ಕೆ ಒಳಗಾಗಿದ್ದ ಜೈನರ ಪರವಾಗಿದೆಯೆಂಬುದು ಸ್ಪಷ್ಟವಾಗಿದೆ. ಘರ್ಷಣೆಗಳಲ್ಲಿ ಮೇಲುಗೈ ಪಡೆದಿದ್ದ ಶ್ರೀವೈಷ್ಣವರು ಜೈನರನ್ನು 'ಪಾಲಿಸ'ಬೇಕೆಂದು ಅವನು ಕೇಳಿಕೊಂಡುದಲ್ಲದೆ, ಬಸದಿಗಳು ಬಹು ಹಿಂದಿನಿಂದ ಅನುಭವಿಸಿಕೊಂಡು ಬಂದ 'ಪಂಚಮಹಾವಾದ್ಯ' ಮತ್ತು 'ಕಲಶ'ಗಳ ಗೌರವಕ್ಕೆ ಶ್ರೀ ವೈಷ್ಣವರು ಅಡ್ಡಿಪಡಿಸಬಾರದೆಂದು ಅವನು ತೀರ್ಪುಕೊಡುತ್ತಾನೆ. ಘರ್ಷಣೆಗಳಿಗೆ ಶಾಸನವು ಕೊಡುವ ಕಾರಣ ಸರಳವಾಗಿದೆ. ಶ್ರೀ ವೈಷ್ಣವರು ಜೈನರ ಮೇಲ್ಕಂಡ ಸವಲತ್ತುಗಳಿಗೆ ಅಡ್ಡಿಪಡಿಸಿದರು. ಜೈನರು ತಮ್ಮ ಉತ್ಸವಗಳಲ್ಲಿ ಪಂಚಮಹಾವಾದ್ಯಗಳನ್ನು ನುಡಿಸುವುದಕ್ಕೆ ಕಲಶವನ್ನು ಕೊಂಡೊಯ್ಯುವುದಕ್ಕೆ ಶ್ರೀವೈಷ್ಣವರು ಆಕ್ಷೇಪವೆತ್ತಿದರು. ಈ ಹಿನ್ನೆಲೆಯಲ್ಲಿ ಎರಡೂ ಘರ್ಷಣೆಗಳು ನಡೆದು, ಬುಕ್ಕನು ಮಧ್ಯೆ ಪ್ರವೇಶಿಸಿ ಮೇಲಿನ ಐತಿಹಾಸಿಕ ಮಹತ್ವದ ತೀರ್ಪನ್ನು ಕೊಟ್ಟನು. ಶ್ರೀವೈಷ್ಣವರು ಆ ತೀರ್ಪಿಗೆ ತಲೆಬಾಗಿದರು. ಅದರ ಫಲವಾಗಿ ತಾತಯ್ಯನು ಕಲ್ಯದ ಬಸದಿಗಳಿಗೆ ಮೇಲಿನ ಎಲ್ಲ ಗೌರವಗಳೂ ಸಲ್ಲಲು ಏರ್ಪಾಟು ಮಾಡಿದುದಲ್ಲದೆ ಆ ವ್ಯವಸ್ಥೆಯ ಸ್ವರೂಪ ವಿವರಗಳನ್ನು ಪ್ರಕಟಿಸಿ ಶ್ರವಣಬೆಳ್ಗೊಳದ ಬಸದಿಗಳ ಕಾವಲಿಗೆ ಕಾವಲು ಗಾರರನ್ನು ನೇಮಿಸಿದನು. ಆ ವ್ಯವಸ್ಥೆಯ ಸ್ವರೂಪದ ವಿವರಗಳನ್ನು ಶ್ರವಣಬೆಳ್ಗೊಳ ಪಾಠ ಒದಗಿಸುತ್ತದೆ. ಎಲ್ಲ ಜೈನರೂ ಮನೆಗೊಂದರಂತೆ ಪ್ರತಿವರ್ಷ ಒಂದು 'ಹಣ'ವನ್ನು ಕೊಡಬೇಕು. ಶ್ರೀವೈಷ್ಣವರು ಆ ಹಣವನ್ನು ಸಂಗ್ರಹಿಸಿ ಆ ಹಣದಿಂದ ಕಾವಲುಗಾರರನ್ನು ನೇಮಿಸುವರು. ಆ ವ್ಯವಸ್ಥೆಗೆ 'ವೈಷ್ಣವ ಅಂಗರಕ್ಷೆ' ಎಂದೇ ಹೆಸರು. ಶ್ರೀವೈಷ್ಣವರು ಜಾಣ್ಮೆಯಿಂದ ಮಾಡಿದ ವ್ಯವಸ್ಥೆ ಇದು ಎಂಬಲ್ಲಿ ಅನುಮಾನವಿಲ್ಲ. ಜೈನ ಬಸದಿಗಳ ರಕ್ಷಣೆಯ ಹೊಣೆ ಶ್ರೀವೈಷ್ಣವರ ದಾದರೂ ಹಣ ಕೊಡುವವರು ಜೈನರು, ಅದನ್ನು ಇಟ್ಟುಕೊಂಡು ಕಾವಲುಗಾರರನ್ನು ನೇಮಿಸುವವರು ಮಾತ್ರ ಶ್ರೀವೈಷ್ಣವರು. ಈ ವ್ಯವಸ್ಥೆಯನ್ನು ಶ್ರೀವೈಷ್ಣವರು ಜೈನರ ಮೇಲೆ ಹೇರಿದರೂ ಜೈನರು ಪ್ರತಿಭಟಿಸದೆ ಒಪ್ಪಿಕೊಳ್ಳಲೇಬೇಕಾಯಿತು. ಏಕೆಂದರೆ ಘರ್ಷಣೆಗಳಲ್ಲಿ ಹೆದರಿದ್ದವರು ಮತ್ತು ಹೆಚ್ಚು ನಷ್ಟಕ್ಕೆ ಈಡಾದವರು ಅವರೇ. ಬುಸುವಿ ಶೆಟ್ಟಿಗೆ ಆ ವ್ಯವಸ್ಥೆಯಿಂದ ಸಂತೋಷವಾಯಿತು. (ಕೊನೆಯ ಪಕ್ಷ ಹಾಗೆಂದು ತೋರಿಸಿಕೊಂಡ). ಅವನು ತಾತಯ್ಯನನ್ನು ಶ್ರವಣಬೆಳ್ಗೊಳಕ್ಕೆ (ಮೇಲ್ಕೋಟೆಯಿಂದ ಅಥವಾ ವಿಜಯನಗರ ದಿಂದ) ಬರಮಾಡಿಕೊಂಡು ತಾತಯ್ಯನ ಉಸ್ತುವಾರಿಯಲ್ಲಿ ಶ್ರೀವೈಷ್ಣವರಿಂದ ಬಸದಿಗಳಿಗೆ ಆಗಿದ್ದ ಭಗ್ನಗಳನ್ನು ಜೀರ್ಣೋದ್ಧಾರ ಮಾಡಿಸಿದನು. ಈ ಹಿನ್ನೆಲೆಯಲ್ಲಿ ಶ್ರವಣಬೆಳ್ಗೊಳದ ಪಾಠದಲ್ಲಿ ನಡೆದಿರುವ ವ್ಯತ್ಯಾಸಗಳನ್ನು ಗಮನಿಸಬೇಕು. ತಾತಯ್ಯನು ಕಲ್ಯಕ್ಕೆ ಹೋಗಲೂ ಇಲ್ಲ, ಕಲ್ಯದಲ್ಲಿ ಶಾಸನಪಾಠವನ್ನು ಹಾಕಿಸಿದಾಗ ಹಾಜರಿರಲೂ ಇಲ್ಲ. ಆ ಕಾರಣ, ಶ್ರೀವೈಷ್ಣವರಿಂದ ಜೈನರ ಕೊಲೆ ಆಯಿತು ಎಂಬ ವಾಸ್ತವಾಂಶವನ್ನು ಕಲ್ಯದ ಶಾಸನದಲ್ಲಿ

ಬರೆಯಿಸಲು ಜೈನರಿಗೆ ಯಾವುದೇ ಸಂಕೋಚವೂ ಆಗಲಿಲ್ಲ. ಆದರೆ ಅದೇ ಶಾಸನವನ್ನು ಒಂದು ತಿಂಗಳ ಬಳಿಕ ಶ್ರವಣಬೆಳ್ಗೊಳದಲ್ಲಿ ಹಾಕಿಸುವ ಸಂದರ್ಭದಲ್ಲಿ ತಾತಯ್ಯ ಅಲ್ಲಿ ಹಾಜರಿದ್ದ. ಬುಸುವಿ ಶೆಟ್ಟಿಯಾಗಲಿ ಇತರ ಜೈನರಾಗಲಿ ತಾತಯ್ಯನ ಸಮಕ್ಷದಲ್ಲಿ ಹಾಕಿಸಿದ ಶಾಸನದಲ್ಲಿ ಶ್ರೀವೈಷ್ಣವರು ಜೈನರನ್ನು ಕೊಂದ ವಾಸ್ತವವನ್ನು ಹೇಳುವುದಕ್ಕೆ ಅಳುಕಿದರು ಅಥವಾ ಕೊನೆಯ ಪಕ್ಷ ಅವರಿಗೆ ಸಂದಿಗ್ಧ ಉಂಟಾಯಿತು. ಹೀಗಾಗಿ, ಬೆಳ್ಗೊಳ ಪಾಠದಲ್ಲಿ ಕೊಲೆಯ ವಿಷಯವನ್ನು ಮರೆಮಾಡಿ, ಅದರ ಜಾಗದಲ್ಲಿ ಸಾಮಾನ್ಯಾರ್ಥದ ಮತ್ತು ಹೆಚ್ಚು ಮೃದುವಾದ 'ಅನ್ಯಾಯಂಗಳು' ಎಂಬ ಮಾತನ್ನು ಸೇರಿಸಲಾಯ್ತು. ಸತ್ಯವನ್ನು ಹೇಳಿ ತಾತಯ್ಯನ ಮನಸ್ಸಿಗೆ ನೋವುಂಟುಮಾಡಲು ಜೈನರಿಗೆ ಇಷ್ಟವಾಗಲಿಲ್ಲ. 'ಅನ್ಯಾಯ'ವು ಕೊಲೆಯ ವಿಷಯವನ್ನೂ ಒಳಗೊಳ್ಳಬಹುದು ತಾನೇ? ಜೈನರಿಗೂ ಶ್ರೀ ವೈಷ್ಣವರಿಗೂ ಆದ ಘರ್ಷಣೆಗಳ ನಿವಾರಣೆಯ ಸಂದರ್ಭದಲ್ಲಿ ಬುಸುವಿಶೆಟ್ಟಿ ವಹಿಸಿದ ಪಾತ್ರದಿಂದ ಸಂತೋಷವಾಗಿ, ಎರಡು ಧರ್ಮದವರೂ ಸೇರಿ ಅವನಿಗೆ 'ಸಂಘನಾಯಕ ಪಟ್ಟ'ವನ್ನು ಕಟ್ಟಿದರು ಎಂದು ಶಾಸನವು ಹೇಳುತ್ತದೆ. ('ಉಭಯ ಸಮಯವೂ ಕೂಡಿ ಬುಸುವಿಶೆಟ್ಟಿಯರಿಗೆ ಸಂಘನಾಯಕ ಪಟ್ಟವ ಕಟ್ಟಿದರು') ಜೈನರಿಗೂ ಶ್ರೀ ವೈಷ್ಣವರಿಗೂ ಆದ ಒಪ್ಪಂದದ ಉಸ್ತುವಾರಿಯನ್ನು ನೋಡಿಕೊಳ್ಳಲು ಇಬ್ಬರ ಪ್ರತಿನಿಧಿಗಳೂ ಇದ್ದ ಒಂದು ಚಿಕ್ಕ ಸಮಿತಿಯನ್ನು ಮಾಡಿ, ಆ ಸಮಿತಿಗೆ ಬುಸುವಿಶೆಟ್ಟಿಯನ್ನು ಮುಖ್ಯನನ್ನಾಗಿ ನೇಮಿಸಿರಬಹುದು. 'ವೈಷ್ಣವ ಅಂಗರಕ್ಷೆ'ಗೆ ಹಣ ಕೊಡಬೇಕಾಗಿದ್ದವರು ಜೈನರೇ—ಆ ದೃಷ್ಟಿಯಿಂದ ಜೈನ ಮುಖಂಡ ಬುಸುವಿಶೆಟ್ಟಿಯ ಅಗತ್ಯವೂ ಇದ್ದಿತು.

ಕಲ್ಯದ ಶಾಸನ ಶಿಲೆಯ ಮೇಲ್ಭಾಗದಲ್ಲಿ ತೆಂಗಿನಕಾಯಿ ಮಾವಿನ ಎಲೆಗಳಿಂದ ಅಲಂಕೃತವಾಗಿರುವ ಕಲಶವನ್ನು ಕೆತ್ತಲಾಗಿದೆ. ಶ್ರವಣಬೆಳ್ಗೊಳದ ಭಂಡಾರ ಬಸದಿಯ ಅಂಗಳದಲ್ಲಿರುವ ಶಾಸನ ಶಿಲೆಯ ಮೇಲೆ ಶಂಖ ಚಕ್ರ ತಿರುನಾಮ ಚಿಹ್ನೆಗಳ ಜೊತೆ ಜೈನ ಲಾಂಛನಗಳನ್ನು ಕೆತ್ತಲಾಗಿದೆಯೆಂಬುದು ಗಮನಾರ್ಹ. ಇವು ಕಲ್ಯ ಶಾಸನ ಶಿಲೆಯ ಮೇಲಿಲ್ಲದಿರುವುದು ಗಮನಾರ್ಹ. (ಕಲ್ಯದ ಶಾಸನ ಶಿಲೆಯ ಕೆಳಭಾಗವು ನೆಲದಲ್ಲಿ ಹೂತು ಹೋಗಿದೆ. ಈಗ ಕಾಣಿಸದೆ ನೆಲದಲ್ಲಿ ಮರೆಯಾಗಿರುವ ಭಾಗದಲ್ಲಿ 'ಪಂಚಮಹಾವಾದ್ಯ'ಗಳ ಚಿತ್ರವಿರುವುದೂ ಅಸಂಭವವಲ್ಲ).

## ಶ್ರೀವೈಷ್ಣವರ ಆಕ್ರಮಣಶೀಲತೆ (Militancy)

ಕರ್ನಾಟಕದಲ್ಲಿ ಮೊದಲಿನಿಂದ ಇದ್ದ ತಿಕ್ಕಾಟ ಜೈನಧರ್ಮ ಮತ್ತು (ವೀರ)ಶೈವ ಧರ್ಮಗಳ ಮಧ್ಯೆ. ಆದರೆ ಇಲ್ಲಿ ತಿಕ್ಕಾಟ ಜೈನಧರ್ಮ ವೈಷ್ಣವ ಧರ್ಮಗಳ ನಡುವೆ ನಡೆದಿರುವುದು ಸ್ವಲ್ಪ ಆಶ್ಚರ್ಯಕರವಾಗಿದೆ. ಶ್ರೀ ವೈಷ್ಣವ ಧರ್ಮದ ಆಕ್ರಮಣ ಶೀಲತೆಗೆ ಕಾರಣವನ್ನು ಹುಡುಕಲು ಹೆಚ್ಚು ದೂರ ಹೋಗಬೇಕಾಗಿಲ್ಲ. ಹನ್ನೆರಡನೆಯ ಶತಮಾನದ ಪೂರ್ವಾರ್ಧದಲ್ಲಿ ಹೊಯ್ಸಳರ ವಿಷ್ಣುವರ್ಧನ ಕಾಲದಲ್ಲಿ, ಶ್ರೀರಾಮಾನುಜರಿಂದಾಗಿ ಮೇಲ್ಕೋಟೆಯು ಒಂದು ಪ್ರಬಲ ಶ್ರೀ ವೈಷ್ಣವ ಕೇಂದ್ರವಾಗಿ ರೂಪುಗೊಂಡಿತು. ಆ

ಧರ್ಮವು ಪ್ರಬಲವಾದಂತೆ, ಅದರ ಧಾರ್ಮಿಕ ಮುಖಂಡರು ಬ್ರಾಹ್ಮಣೇತರ ಜನರಿಗೂ ಶ್ರೀವೈಷ್ಣವ ದೀಕ್ಷೆಯನ್ನು ಕೊಡುತ್ತ ತಮ್ಮ ಧರ್ಮಕ್ಕೆ ಹೆಚ್ಚು ಹೆಚ್ಚು ಜನಸಾಮಾನ್ಯರ ಬೆಂಬಲವನ್ನು ಪಡೆದುಕೊಂಡರು. (ಶ್ರೀ ವೈಷ್ಣವ ದೀಕ್ಷೆಯು ಬ್ರಾಹ್ಮಣೇತರರು ವಿಷ್ಣುಭಕ್ತರಾಗುವಂತೆ ಮಾಡಿತೇ ಹೊರತು ಅವರು ಶ್ರೀ ವೈಷ್ಣವ ಬ್ರಾಹ್ಮಣರಾಗಲು ಸಾಧ್ಯವಿಲ್ಲ.) ಉದಾಹರಣೆಗೆ, ಬುಕ್ಕನ ಮುಂದೆ ನೆರೆದ ಶ್ರೀವೈಷ್ಣವ ಸಮೂಹದಲ್ಲಿ ಮೇಲ್ಕೋಟೆ ಇವೇ ಮೊದಲಾದ ಕ್ಷೇತ್ರಗಳ ಶ್ರೀವೈಷ್ಣವ ಗುರುಗಳಲ್ಲದೆ ಬೋವಿಗಳಂತಹ ಶೂದ್ರರೂ, ಹದಿನೆಂಟು ಜಾತಿಯ ಜನರೂ, ಅಸ್ಪೃಶ್ಯ ಜಾತಿಯ ತಿರುಕುಲ ಜಾಂಬವ ಕುಲದವರೂ (ಬಲಗೈ ಎಡಗೈ ಹರಿಜನರೂ) ಇದ್ದರು. ಶ್ರವಣಬೆಳ್ಗೊಳವು ಕ್ರಿ.ಶ. ಆರಂಭದಿಂದಲೂ ಜೈನ ಧರ್ಮದ ಪ್ರಬಲ ಕೇಂದ್ರವಾಗಿತ್ತು. ಶ್ರೀ ವೈಷ್ಣವಧರ್ಮ ಮತ್ತು ಜೈನಧರ್ಮಗಳ ಪ್ರಬಲ ಕೇಂದ್ರಗಳಾದ ಮೇಲ್ಕೋಟೆ ಶ್ರವಣಬೆಳ್ಗೊಳಗಳ ಮಧ್ಯೆ ದೂರವೇನೂ ಹೆಚ್ಚಾಗಿಲ್ಲ. ಎರಡು ಧರ್ಮಗಳ ಮಧ್ಯದ ತಿಕ್ಕಾಟವೆಂದರೆ ಎರಡು ಧರ್ಮಗಳ ಪ್ರಬಲ ಕೇಂದ್ರಗಳ ಘರ್ಷಣೆಯೂ ಆಗಿತ್ತು.

ಶಾಸನದಲ್ಲಿ ಜೈನರನ್ನು 'ಭಕ್ತರು' ಅನ್ಯಾಯದಿಂದ ಕೊಲ್ಲುತ್ತಿದ್ದರು ಎಂಬ ಮಾತಿದೆ. ಇಲ್ಲಿ 'ಭಕ್ತರು' ಎಂಬ ಮಾತು ಶ್ರೀವೈಷ್ಣವರ ಜೊತೆ ಆ ಬ್ರಾಹ್ಮಣರ ಶೂದ್ರ ಅನುಯಾಯಿಗಳನ್ನೂ ಒಳಗೊಳ್ಳುವಂತೆ ಕಾಣುತ್ತದೆ.

ಧಾರ್ಮಿಕ ಘರ್ಷಣೆಗಳಿಂದಾಗಿ ಹಲವಾರು ಜೈನ ದೇವಾಲಯಗಳು ನಾಶವಾದವು; ಜೈನರೂ ಪ್ರತಿಯಾಗಿ ಕಡಿಮೆ ಸಂಖ್ಯೆಯ ವೈಷ್ಣವ ದೇವಾಲಯಗಳನ್ನು ಹಾಳು ಮಾಡಿದರು. ಇದು ಕೇವಲ ಊಹೆಯಲ್ಲ—ಇದಕ್ಕೆ ಬೆಂಬಲವಾಗಿ ಕೆಲವು ಭಗ್ನ ಸ್ಮಾರಕಗಳ ಸಾಕ್ಷಿಯಿದೆ. ಶ್ರವಣಬೆಳ್ಗೊಳ ಮತ್ತು ಕಲ್ಯಗಳಿಗೆ ನಾನು ಹಲವಾರು ಬಾರಿ ಭೇಟಿ ಕೊಟ್ಟು ಭಗ್ನಗೊಂಡ ಜೈನ ಮತ್ತು ಶ್ರೀವೈಷ್ಣವ ಪ್ರಾಚೀನ ಕಟ್ಟಡಗಳು ಅಕ್ಕಪಕ್ಕದಲ್ಲೇ ಇರುವುದನ್ನು ಗುರುತಿಸಿದ್ದೇನೆ. ಉದಾಹರಣೆಗೆ, ಶ್ರವಣಬೆಳ್ಗೊಳದ ಪಕ್ಕದಲ್ಲೇ ಇರುವ ಹಳೆಯ ಬೆಳ್ಗೊಳ ಎಂಬ ಊರಲ್ಲಿ ಆಳ್ವಾರರ ವಿಗ್ರಹಗಳಿರುವ ಒಂದು ಭಗ್ನ ವಿಷ್ಣು ದೇವಾಲಯದ ಪಕ್ಕದಲ್ಲಿ ಭಗ್ನ ಬಸದಿಯೊಂದು ನಿಂತಿದೆ. ಆ ಊರಲ್ಲಿ ದೊರಕುವ ಹತ್ತಾರು ಮುರಿದು ಹೋದ ಶಿಲ್ಪಗಳು ಆ ಊರಲ್ಲಿದ್ದು ನಾಶವಾಗಿರಬಹುದಾದ ಇನ್ನೂ ಕೆಲವು ಬಸದಿಗಳಿಗೆ ಮೂಕ ಸಾಕ್ಷಿಯಾಗಿ ನಿಂತಿವೆ. ಕಲ್ಯದಲ್ಲಿ ಹದಿಮೂರನೇ ಶತಮಾನದ ಶಾಸನವಿರುವ ಪಾರ್ಶ್ವನಾಥ ಜಿನ ವಿಗ್ರಹವಿದೆ. ಆ ಊರಲ್ಲಿ ಒಂದು ನಿಸಿದಿಗಲ್ಲು, ಒಂದು ಚಿಕ್ಕ ಜಿನ ವಿಗ್ರಹ, 'ಬಸದಿ ಗುಂಡಿ' ಎಂದು ಕರೆಯುವ ಜಾಗ, ಮುಕ್ಕೊಡೆ ಶಿಲ್ಪಗಳು, ಮಾನಸ್ತಂಭ ಇವೇ ಮುಂತಾದ ಸಾಕ್ಷಿಗಳು ಆ ಊರು ಒಂದು ಕಾಲಕ್ಕೆ ದೊಡ್ಡ ಜೈನಕೇಂದ್ರವಾಗಿದ್ದಿತೆಂಬುದಕ್ಕೆ ಸಾಕ್ಷಿಗಳು ('ಬಸದಿ ಗುಂಡಿ' ಎಂಬ ಜಾಗ ಈಗ ಬರೀ ತಿಪ್ಪೆಗಳಿಂದ ತುಂಬಿರುವ ಒಂದು ತಗ್ಗು ಜಾಗವಾಗಿದ್ದರೂ ಒಂದು ಕಾಲಕ್ಕೆ ಅಲ್ಲಿ ಐದು ಬಸದಿಗಳಿದ್ದುವು). ಕಲ್ಯಕ್ಕೆ ನಾಲ್ಕು ಕಿಲೋಮೀಟರ್ ದೂರದ ಹೂಜಿಗಲ್ಲು ಎಂಬ ಊರ ಪಕ್ಕದಲ್ಲಿ ಹದಿನೈದಕ್ಕೂ ಹೆಚ್ಚಿನ ಜೈನಶಿಲ್ಪಗಳಿರುವ ಬಂಡೆಯಿದೆ, ಮತ್ತು ಅದರ ಪಕ್ಕದ ಮಣ್ಣಿನ ರಾಶಿಯಲ್ಲಿ ಭಗ್ನ

ಬಸದಿಯೊಂದು ಹೂತುಹೋಗಿದ್ದರೆ ಆಶ್ಚರ್ಯವಿಲ್ಲ. ಕಲ್ಯ ಮತ್ತು ಸುತ್ತಮುತ್ತ ಜೈನ ಮಂದಿರಗಳ ದೊಡ್ಡ ಪ್ರಮಾಣದ ವಿನಾಶ ನಡೆಯಿತೆಂಬುದಕ್ಕೆ ಇವು ಪ್ರಬಲ ಸಾಕ್ಷ್ಯಾಧಾರಗಳು.

ಕಲ್ಯದಲ್ಲಿ ಚಕ್ರತ್ತಾಳ್ವಾರರ ವಿಗ್ರಹವೊಂದಿದ್ದು ಅದು ಈಗ ಮಾಯವಾಗಿದೆ. ಮಾಗಡಿಯಲ್ಲಿ ಶ್ರೀವೈಷ್ಣವರಿಂದ ಆರಾಧನೆಗೊಳ್ಳುತ್ತಿರುವ ರಂಗನಾಥಸ್ವಾಮಿಯ ವಿಗ್ರಹವು ಮೂಲತಃ ಕಲ್ಯದ್ದೆಂದು ಜನ ಹೇಳುತ್ತಾರೆ. ಈಗಲೂ ಮಾಗಡಿಯ ಆ ದೇವರ ರಥೋತ್ಸವದಲ್ಲಿ ದೇವರ ಮೊದಲ ಪ್ರಸಾದವು ಕಲ್ಯದ ಜನರಿಗೆ ಮೀಸಲು. ಇದೆಲ್ಲವೂ ಕಲ್ಯದಲ್ಲಿ ನಡೆದ ಶ್ರೀ ವೈಷ್ಣವ ದೇವಾಲಯದ ನಾಶಕ್ಕೆ ಸಾಕ್ಷ್ಯಾಧಾರ. ಹಳೆಯ ಬೆಳ್ಗೊಳ ಮತ್ತು ಕಲ್ಯ ಎರಡು ಊರುಗಳಲ್ಲಿಯೂ 'ಉಷ್ಟಮರು' ಎಂದು ಕರೆಯುವ ಶ್ರೀ ವೈಷ್ಣವ ಮತದ ಶೂದ್ರ ಅನುಯಾಯಿಗಳಿದ್ದಾರೆ. ಆ ಎರಡು ಊರುಗಳಲ್ಲಿ ಈಗ ಜೈನರು ಇಲ್ಲದಿದ್ದರೂ ಅಲ್ಲಿ ಮೊದಲು ಜೈನರಿದ್ದರೆಂದೂ, 'ಭಕ್ತರ' ಉಪಟಳವನ್ನು ತಾಳಲಾರದೆ ಅವರು ಬೇರೆಡೆಗಳಿಗೆ ವಲಸೆ ಹೋದರೆಂದೂ ಹೇಳಲು ಪ್ರಬಲ ಸೂಚನೆಗಳಿವೆ. ಹಳೆಯ ಬೆಳ್ಗೊಳದ ಜೈನರು ಸಮೀಪದ ಶ್ರವಣಬೆಳ್ಗೊಳಕ್ಕೂ ಕಲ್ಯದ ಜನರು ಸಮೀಪದ ಸಂಕಿಘಟ್ಟಕ್ಕೂ ಹೋಗಿ ನೆಲಸಿರಬೇಕು. ಶ್ರವಣಬೆಳ್ಗೊಳವಂತೂ ಸರಿಯೇ, ಸಂಕಿಘಟ್ಟದಲ್ಲಿ ಈಗಲೂ ಸಾಕಷ್ಟು ಸಂಖ್ಯೆಯ ಜೈನರಿದ್ದು ಅವರು ಅಲ್ಲಿನ ವರ್ಧಮಾನಸ್ವಾಮಿಯನ್ನು ಆರಾಧಿಸುತ್ತಿದ್ದಾರೆ.

ಜೈನ ವೈಷ್ಣವ ಘರ್ಷಣೆಗಳು ಕಲ್ಯ ಶ್ರವಣಬೆಳ್ಗೊಳಗಳಿಗೆ ಸೀಮಿತವಾಗಿರಲಿಲ್ಲ. ಬುಕ್ಕನ ತೀರ್ಪು ಬರುವ ಮುನ್ನ, ಬಹುಶಃ ಬಂದ ಮೇಲೂ–ಬಹು ವ್ಯಾಪಕವಾಗಿ ಘರ್ಷಣೆಗಳು ನಡೆದಿರುವಂತೆ ತೋರುತ್ತದೆ. ನಾಗಮಂಗಲ ತಾಲೂಕಿನ ಹಟ್ಣದಲ್ಲಿರುವ ವೀರಭದ್ರ ದೇವಾಲಯವು ಮೂಲತಃ ಪಾರ್ಶ್ವನಾಥ ಬಸದಿಯಾಗಿತ್ತು. ಜೈನ ವಿಗ್ರಹವಿದ್ದ ಪೀಠದ ಮೇಲೆ ಈಗ ವೀರಭದ್ರನ ವಿಗ್ರಹವಿದೆ. ಪಿರಿಯಾಪಟ್ಟಣ ತಾಲೂಕಿನ ಹೊನ್ನೂರಿನಲ್ಲಿ ರಂಗಸ್ವಾಮಿ ಗುಡಿಯೆಂದು ಕರೆಯುವ ದೇವಾಲಯದಲ್ಲಿರುವುದು ವಾಸ್ತವವಾಗಿ ಜಿನ ವಿಗ್ರಹ; ಅದಕ್ಕೆ ನಾಮವನ್ನು ಹಚ್ಚಿ ವಿಷ್ಣು ವಿಗ್ರಹವಾಗಿ ಮಾಡಲಾಗಿದೆ. ಮಾಗಡಿ ತಾಲೂಕಿನ ನಿಸಕೂರಿನಲ್ಲಿ ಎಪ್ಪತ್ತೈದು ಬಸದಿಗಳಿದ್ದವೆಂದು ಜನ ಹೇಳುತ್ತಾರೆ; ಈಗ ಅಲ್ಲಿ ಬಸದಿಗಳ ಬದಲು ಕೇವಲ ಬೂದಿ ಗುಂಡಿಗಳಿವೆ. ತಿಪಟೂರಿನ ಸಮೀಪದ ಹಳ್ಳಿಯೊಂದರಲ್ಲಿ ಜಿನ ಬಸದಿಯು ಶಿವದೇವಾಲಯವಾಗಿ ಪರಿವರ್ತಿತವಾಗಿ, ಜಿನ ಬಿಂಬಕ್ಕೆ ಭಸ್ಮ, ಕರಡಿಗೆಗಳನ್ನು ಅಳವಡಿಸಲಾಗಿದೆ. ಈ ಮತ್ತು ಇಂತಹ ಎಲ್ಲಾ ಉದಾಹರಣೆಗಳೂ ಹದಿನಾಲ್ಕನೇ ಶತಮಾನದ ಘರ್ಷಣೆಗಳ ಫಲವೇ

ಎಂದು ಖಚಿತವಾಗಿ ಹೇಳಲಾಗದಿದ್ದರೂ ಅವುಗಳಲ್ಲಿ ಕೆಲವಾದರೂ ಆ ಘರ್ಷಣೆಗಳ ಫಲವಿರಬಹುದು ಎಂದು ಅನುಮಾನಿಸಲು ಸಾಧ್ಯ.

ಹದಿನಾಲ್ಕನೇ ಶತಮಾನದಲ್ಲಿ ಕಲ್ಯ–ಶ್ರವಣಬೆಳ್ಗೊಳ ಪ್ರದೇಶದ ಜೈನರು ಅನುಭವಿಸಿದ ಯಾತನೆ, ಭೀತಿಯ ನೆರಳಲ್ಲಿ ಅವರು ಬದುಕಬೇಕಾಗಿ ಬಂದ ಬವಣೆ ಇವುಗಳನ್ನು ಅರ್ಥ ಮಾಡಿಕೊಂಡ ಬುಕ್ಕ ಅತ್ಯಂತ ನೋವಿನಿಂದ, ಅಷ್ಟೇ ದೃಢವಾಗಿ, ಆದರೆ ಎರಡೂ ಪಂಗಡಗಳ ಮಧ್ಯದ ವಿರಸ ಹೆಚ್ಚಾಗದ ರೀತಿಯಲ್ಲಿ, ಆದರೆ ಪ್ರೀತಿಯಿಂದ ತನ್ನ ಹೃದಯಸ್ಪರ್ಶಿ ತೀರ್ಪನ್ನು ಕೊಟ್ಟನು. ಬುಕ್ಕನ ತೀರ್ಪು ಘರ್ಷಣೆಗಳ ಮೊನಚನ್ನು ಮೊಂಡು ಮಾಡಿರಬಹುದು, ಅನಾಹುತಗಳ ಪ್ರಮಾಣವನ್ನು ತಗ್ಗಿಸಿರಬಹುದು; ಆದರೆ ಘರ್ಷಣೆಗಳನ್ನು ಸಂಪೂರ್ಣವಾಗಿ ನಿಲ್ಲಿಸಿತೇ ಎಂಬುದು ಅನುಮಾನಾಸ್ಪದ. ಒಂದು ವ್ಯಾಪಾರ ಕೇಂದ್ರವೂ ಆಗಿದ್ದ ಕಲ್ಯದಲ್ಲಿ ಅವನು ತನ್ನ ಪ್ರತಿನಿಧಿಯಾಗಿ ಒಬ್ಬ ಅಧಿಕಾರಿಯನ್ನು ನೇಮಿಸಿದಂತೆ ಕಾಣುತ್ತದೆ. ಆ ಅಧಿಕಾರಿ ಇತರ ಕರ್ತವ್ಯಗಳ ಜೊತೆ ಘರ್ಷಣೆಗಳಾಗದಂತೆ, ಜೈನ ದೇವಾಲಯಗಳಿಗೆ ಹೆಚ್ಚಿನ ಹಾನಿ ಆಗದಂತೆ ನೋಡಿಕೊಳ್ಳುವ ಕರ್ತವ್ಯವನ್ನೂ ನೆರವೇರಿಸಿರಬಹುದು. ಕ್ರಿ.ಶ.1386 ರ ಶಾಸನವೊಂದು ವಿಜಯನಗರದ ಅಧಿಕಾರಿ ಕಲ್ಯದಲ್ಲಿದ್ದು ಕೆಲಸ ಮಾಡುತ್ತಿದ್ದುದನ್ನು ಸೂಚಿಸುತ್ತದೆ.

ಸಮಸ್ಯಾತ್ಮಕ ಪದಗಳು:

ಶಾಸನದಲ್ಲಿ ಬಳಕೆಯಾಗಿರುವ ಕೆಲವು ಪದಗಳ ಅರ್ಥ ಇನ್ನೂ ಪರಿಹಾರವಾಗಿಲ್ಲ. 'ಮೋಷ್ಟಿಕ' ಎಂದರೇನು ತಿಳಿಯದು. 'ತಿರುವಡಿ'ಯೆಂಬುದು ಭಗವಂತನ ಪಾದಗಳನ್ನು ಪೂಜಿಸುವ ಜನರನ್ನು (ಶ್ರೀಪಾದಂ ತಾಂಗಿಗಳ್) ಸೂಚಿಸಬಹುದು. 'ತಣ್ಣೀರವರ್' ಎಂಬುದು ದೇವರ ತೀರ್ಥವನ್ನು ಮೊದಲು ಸ್ವೀಕರಿಸುವ ತೀರ್ಥಗಾರರ್ ಅಥವಾ ಮುದಲ್ ತೀರ್ಥಗಾರರ್ ಇರಬಹುದು ಅಥವಾ ದೇವರ ಅಭಿಷೇಕಕ್ಕೆ ನೀರು ತರುವ ಸೇವಾಕಾರ್ಯವನ್ನು (ತೀರ್ಥಕೈಂಕರ್ಯಮ್) ಕೈಕೊಂಡವರು ಇರಬಹುದು. 'ತಿರುಪಣಿ'ಯವರು ದೇವಾಲಯದ ಸೇವಕವರ್ಗದವರಿರಬಹುದು. 'ತಿರುಕುಲ' 'ಜಾಂಬವಕುಲ'ದವರು ಹರಿಜನರಲ್ಲಿರುವ ಬಲಗೈ ಎಡಗೈ ಪಂಗಡದವರು. ಒಂದು ನಂಬಿಕೆಯ ಪ್ರಕಾರ ಶ್ರೀರಾಮಪ್ರಿಯ ವಿಗ್ರಹವನ್ನು ತರಲು ದೆಹಲಿಗೆ ಹೋದ ಶ್ರೀರಾಮಾನುಜರಿಗೆ ಸಹಾಯಕರಾಗಿ ಜೊತೆಯಲ್ಲಿದ್ದ ಹರಿಜನರನ್ನು ಅವರು ಪ್ರೀತಿಯಿಂದ 'ತಿರುಕುಲ'ದವರೆಂದು ಕರೆದರು. 'ತಿರುಕುಲ' ಪದದ ಅತ್ಯಂತ ಪ್ರಾಚೀನ ಪ್ರಯೋಗವು ಶ್ರವಣಬೆಳ್ಗೊಳ ಶಾಸನದಲ್ಲಿ ದೊರಕುವುದು ಗಮನಾರ್ಹ (ತಮಿಳು

ಕೃತಿಗಳ ಪ್ರಯೋಗಗಳೆಲ್ಲಾ ಈಚಿನವು). 'ಹದಿನೆಂಟು ನಾಡು ಎಂಬುದು ಹಿಂದೂಗಳ ಸಾಂಪ್ರದಾಯಿಕ ಹದಿನೆಂಟು ಜಾತಿಗಳನ್ನು ಹೇಳುತ್ತದೆ. ಶ್ರೀ ವೈಷ್ಣವರನ್ನು 'ಭಕ್ತ'ರೆಂದು ಕರೆದಿರುವುದು ಗಮನಾರ್ಹ. 'ಆಚಾರ್ಯ', 'ಸಮಯಿ', 'ಸಾತ್ವಿಕ' ಪದಗಳಿಗಿರುವ ನಿರ್ದಿಷ್ಟಾರ್ಥಗಳನ್ನು, ವ್ಯತ್ಯಾಸಗಳನ್ನು ಗುರುತಿಸುವುದು ಇನ್ನೂ ಕಷ್ಟವಾಗಿದೆ. 'ನಾಲ್ವತ್ತೆಂಟು ಜನ' ಉಕ್ತಿಯ ಅರ್ಥವೂ ಅಷ್ಟೇ; ಬಹುಶಃ ಅದೊಂದು ಜಾತಿಯ ಅಥವಾ ವೃತ್ತಿಯ ಯಾವುದೋ ಶ್ರೇಣಿಯನ್ನು (guild) ಸೂಚಿಸುವಂತೆ ಕಾಣುತ್ತದೆ.